## ಕಳೆದ ಸಂಚಿಕೆಯಲ್ಲಿ



ಮನೆಗೆ ಬಂದ ನವವಧು ಸಡಗರವನ್ನಷ್ಟೇ ತರಲಿಲ್ಲ, ಮನೆಯ ಹೆಣ್ಣುಮಕ್ಕಳು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆಯೂ ನಡೆದು ಕೊಳ್ಳತೊಡಗಿದಳು. ತನ್ನ ವಾರಗಿತ್ತಿ ಹಾಗೂ ಮೈದುನ ನಡೆದುಕೊಳ್ಳುತ್ತಿದ್ದ ರೀತಿ, ಎಗ್ಗಿಲ್ಲದೆ ನಡೆಸುತ್ತಿದ್ದ ಸಲ್ಲಾಪ ಸೀತಾಲಕ್ಷ್ಮಿಗೆ ಕ್ರಾಂತಿಯಂತೆ ಕಾಣಿಸತೊಡಗಿತು. ಹೊಸ ಸೊಸೆ ಉಳ್ಳವರ ಮನೆಯವಳೆಂದು ಮನೆಯಲ್ಲಿ ಯಾರೂ ಕೆಲಸ ಹೇಳುತ್ತಿರಲಿಲ್ಲ. ನವವಧುವಿಗೆ ಕೆಲಸ ಕಲಿತುಕೊಳ್ಳುವ ಉತ್ಸಾಹವೂ ಇರಲಿಲ್ಲ. ಕನಕಳ ಮಿತಿ ನಡವಳಿಕೆ ಹಾಗೂ ಪತ್ನಿಗೆ ಸದರ ಕೊಟ್ಟಿರುವ ತಮ್ಮನ ಮೇಲೆ ಶಿವರಾಮ ಸಿಡುಕತೊಡಗಿದ. ಅದರ ಬಿಸಿ ತಾಕತೊಡಗಿದ್ದು ಸೀತಾಲಕ್ಷ್ಮಿಗೆ. ಮುಟ್ಟು ನಿಂತು ಗರ್ಭವತಿಯಾದ ಮೇಲೆ ಸೀತಾಲಕ್ಷ್ಮಿಗೆ ಮನೆಯಲ್ಲಿ ವಿಶೇಷ ಉಪಚಾರ ದೊರೆಯತೊಡಗಿತು. ಆ ಸಂದರ್ಭದಲ್ಲೂ ಗಂಡನ ಮುನಿಸೇನೂ ಕಡಿಮೆಯಾಗಲಿಲ್ಲ. ತನಗೆ ದೊರೆತಿರುವ ಸುಖ ಕಮಲಾಳಿಗೆ ಎಂದೂ ದೊರೆಯದೆನ್ನಿಸಿ, ಸೀತಾಲಕ್ಷ್ಮಿಗೆ ಬೇಸರವೆನ್ನಿಸಿತು. ಆದೊಂದು ದಿನ ನಡೆಯಬಾರದ ಘಟನೆ ನಡೆದುಹೋಯಿತು. ಬೆಳಗ್ಗೆ ಮನೆಮಂದಿಯೆಲ್ಲ ಎದ್ದು ನೋಡಿದರೆ ಕಮಲಳ ಸುಳಿವೇ ಇಲ್ಲ.

ಮೇಲೆ, ಕೆಳಗೆ ಅಂತಾರಪ್ಪಾ' ಎನ್ನುವ ಕನಿಕರ. ಸುದ್ದಿ ನಿಖರವಾಗಿ ತಿಳಿಯುವಂಥ ಯಾವ ವ್ಯವಸ್ಥೆ ಇತ್ತು? ಯಾರೋ ಹೇಳಿದ್ದು, ಯಾರೋ ಕೇಳಿದ್ದು. ಸುತ್ತಮುತ್ತ ಹಬ್ಬಿಸಿದ್ದು. ಸೇರೇಗಾರರ ಬೆನ್ನು ಬಿದ್ದು ಎನ್ನುವಂತೆ ಕೆಲವರು ಘಟ್ಟ ಇಳಿದರು. ಕೆಲವರು ಇದ್ದಲ್ಲಿಗೇ ಕಚ್ಚಿಕೊಂಡರು. ಉಳಿದುಕೊಂಡವರನ್ನು ಕಾಯಮ್ಮಾಗಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಶಿವರಾಮ ಒಂದಿಷ್ಟು ಕೈ ಸುಟ್ಟುಕೊಂಡ. ಸೇರೇಗಾರರ ಮೂಲಕ ಸಾಲಕ್ಕೆ ಒಂದಂಶ ಮುರಿದುಕೊಂಡು ಸಂದಾಯವಾಗುತ್ತಿದ್ದ ಕೂಲಿ ಪೂರ್ತಿಯಾಗಿ ಕೈಗೆ ಸಿಗತೊಡಗಿದ್ದು ಕೆಲಸಗಾರರಿಗೆ ಹಬ್ಬ. ಭಟ್ಟಿ ಸಾರಾಯಿಯ ಗಡಂಗು ಇಟ್ಟವನು ಉದ್ಧಾರವಾದ.

'ಹಿಂಗೇ ಕುಡೀತಿದ್ರೆ ನಿಮಗೂ ಬರುತ್ತೆ ಅರಿಶಿನ ಕಾಮಾಲೆ' ಎಂದು ಶಿವರಾಮ ಹೆದರಿಕೆ ಹುಟ್ಟಿಸಲು ನೋಡಿದ್ದು ಗೋರ್ಕಲ್ಲಿನ ಮೇಲೆ ಸುರಿದ ಮಳೆಯಂತಾಯ್ತು. ಕುಡಿಯದವರು ಅವರಲ್ಲಿ ಯಾರಿದ್ದರು? ಮೈಕೈ ಹುಡಿ ಮಾಡಿಕೊಂಡು ದುಡಿಯುವವರಿಗೆ ಕುಡಿಯದಿದ್ದರೆ ಮೈಕೈ ನೋವಿಗೆ ಬೇರೆ ಮದ್ದು ಇಲ್ಲ. ಹೆಂಗಸರ ಬಾಣಂತನ ಅಂದರೂ ಅಷ್ಟೇ. ಹೊಟ್ಟೆಯೊಳಗಿದ್ದದ್ದು ಹೊರಗೆ ಬರುವವರೆಗೆ ಕೆಲಸ ಮಾಡಿ, ಆಮೇಲೆ ವಾರೊಪ್ಪತ್ತು ಉಳಿಮಾಡಿದರೆ ಬಾಣಂತನ ಮುಗಿದ ಲೆಕ್ಕ. ಹಸಿ ಬಾಣಂತಿ ಸಾರಾಯಿ ಕುಡಿದು ಮೈ ಒಣಗಿಸಿಕೊಂಡು, ಇಲ್ಲಾ ಬತ್ತಿಸಿಕೊಂಡು ಕೆಲಸಕ್ಕೆ ಹಾಜರು. ಪಾಪ ಪುಣ್ಯ ನೋಡಿ ಮನೆಯವರು ಹಗೂರದ ಕೆಲಸ ಹೇಳಬೇಕು. ಆರಾರು ತಿಂಗಳು ನಡೆಯುತ್ತಿದ್ದ ದೊಡ್ಡವರ ಮನೆಯ ಬಾಣಂತನ ಅಂಥವರ ಕಲ್ಪನೆಗೂ ಮೀರಿದ್ದು. ದೊಡ್ಡವರ ಮನೆಗಳಲ್ಲೂ ಕದ್ದು ಮುಚ್ಚಿ ಕೆಲಸದಾಳುಗಳಿಂದ ಸಾರಾಯಿ ತರಿಸಿಕೊಂಡು ಔಷಧದಂತೆ ಸೇವಿಸುವ ಕ್ರಮ ಕೆಲವರಲ್ಲಿತ್ತು. ಹೊಟ್ಟೆ ಚಟ್ಟಲು ಉದ್ದಾನುದ್ದದ ಹತ್ತಿ ಸೀರೆಯನ್ನು ಬಿಗ್ಗಂಬಿಗಿಯಾಗಿ ಹೊಟ್ಟೆಗೆ ಸುತ್ತಿಕೊಳ್ಳುವುದೇನು, ಹಾಲು ತುಪ್ಪದಲ್ಲಿ ಕೈ ತೊಳೆಯುವುದೇನು, ಕತ್ತಲುಕೋಣೆಯಲ್ಲಿ ತಿಂಗಳುಗಟ್ಟಲೆ ಕೊಳೆಯುವುದೇನು, ಕಷಾಯ, ಲೇಹ್ಯ ಎಂದು ಬಗೆ ಬಗೆಯ ಆರೈಕೆ ಮಾಡಿಕೊಳ್ಳುವುದೇನು, ಇಷ್ಟಾದರೂ ಬಾಣಂತಿಗೆ ಹುಷಾರು ತಪ್ಪಿದ ಸುದ್ದಿ ತೀರಾ ಅಪರೂದ್ದೇನಾಗಿರಲಿಲ್ಲ. ತಲೆ ಕೆಟ್ಟಂತೆ ಬಾಣಂತಿ ಹುಚ್ಚುಹುಚ್ಚಾಗಿ ನಡೆದುಕೊಂಡರೆ 'ಬಾಣಂತಿ ಸನ್ನಿ!. ಸೇರುಗಟ್ಟಲೆ ಕಾಳುಮೆಣಸಿನ ಸಾರು ಉಂಡುಂಡು, ಬಾಯಾರಿಕೆಯಾದರೆ ಹನಿ ನೀರೂ ಕುಡಿಯಬಾರದೆಂಬ ಕಟ್ಟಾಜ್ಞೆಗೆ ಮಣಿದು, ಬಾಣಂತನ ಅಂದರೆ ಇದ್ದುಳ್ಳವರ ಮನೆಯಲ್ಲಿ ಅದರ ಅರ್ಥವೇ ಬೇರೆ. ಕಾನಿಗೆ ಹೋಗಿ ಸೊಪ್ಪು ಕಡಿಯುವಾಗ ಅಲ್ಲೇ ಹಡೆದು, ಕೈಲಿದ್ದ ಕತ್ತಿಯಿಂದ ಹೊಕ್ಕಳು ಬಳ್ಳಿ ಕತ್ತರಿಸಿ, ಆರತಿ ತಟ್ಟೆಯಂತೆ ಹಸುಗೂಸನ್ನು ಕೈಯಲ್ಲೆತ್ತಿಕೊಂಡು ಬಂದವಳನ್ನು ಖುದ್ದು ನೋಡಿ ಸೀತಾಲಕ್ಷ್ಮಿಯ ಮೈ ಚುಂಗರಿಸಿದ್ದಿತ್ತು. ಇನ್ನೇನು ಅವಳಿಗೂ ಹತ್ತಿರ ಬರುತ್ತಿದೆ ಬಾಣಂತನದ ಸೆರೆಮನೆ ವಾಸ. ಚೂರು ಧೈರ್ಯ, ಜಾಸ್ತಿ ಹೆದರಿಕೆ. ವೆಂಕಮ್ಮ ಹೇಳುತ್ತಿದ್ದರು...

'ಏನಾಗಲ್ಲ ಕಣೇ. ಸುಖರೂಪವಾಗಿ ಹೆರಿಗೆ ಆಗಿ ಕೃಷ್ಣ ಪರಮಾತ್ಮನಂಥ ಮಗನ್ನ ಎತ್ಗಂಬರ್ತಿ. ನಾನು ಹರಕೆ ಹೇಳ್ಕಂಡಿದೀನಿ...'

ಕಮಲಾ ಕಣ್ಮರೆಯಾಗಿದ್ದೇ ಆಗಿದ್ದು, ವೆಂಕಮ್ಮನ ಬಾಯಿ ಸತ್ತು ಹೋಯ್ತು. ಕೂತರೆ ಕೂತಲ್ಲೇ, ನಿಂತರೆ ನಿಂತಲ್ಲೇ ಎನ್ನುವ ಪರಿಸ್ಥಿತಿ. ಚೊಚ್ಚಲು ಬಸುರಿಗೆ ಬಯಕೆ ಶಾಸ್ತ್ರ ಮಾಡುವ ಉಮೇದು ಯಾರಲ್ಲೂ ಉಳಿದುಕೊಂಡಿರಲಿಲ್ಲ. ಊರುಮನೆಯವರನ್ನು ಕರೆದು ಪುರೋಹಿತರ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ಬಯಕೆ ಮಾಡಬೇಕೆಂಬ ಮಹದಾಸೆ ಇಟ್ಟುಕೊಂಡಿದ್ದ ವೆಂಕಮ್ಮ ಈಗ ಆ ಸುದ್ದಿಯನ್ನೇ ಎತ್ತುತ್ತಿರಲಿಲ್ಲ. 'ಸರಿಯಾಗ್ತಾಳೆ, ನಿಧಾನಕ್ಕೆ...' ಅನ್ನುತ್ತಿದ್ದ ವೆಂಕಟರಾಮು. 'ಗೊತ್ತೇ ಆಗದೆ ಸಿಡಿಲು ಹೊಡೆದಂತಾಗಿದೆ ಅಮ್ಮಂಗೆ...' ಎನ್ನುವುದನ್ನು ಸೇರಿಸುತ್ತಿದ್ದ. ಅಕ್ಕ ಎಲ್ಲಿ ಹೋದಳು, ಏನಾದಳು ಎಂದು ತಲೆ ಕೆಡಿಸಿಕೊಂಡು ಆ ಮನೆಯಲ್ಲಿ ಯಾರಿಗೂ ಕಾಣದಂತೆ ಕಣ್ಣೀರು ಒರೆಸಿಕೊಳ್ಳುತ್ತಿದ್ದವನು ಅವನೊಬ್ಬನೇ. ವೆಂಕಮ್ಮ ಅಳುವುದನ್ನು ನಿಲ್ಲಿಸಿದ್ದರು. ಅಳಬೇಕೆಂಬುದನ್ನು ಮರೆತು ಹೋದವರಂತಿದ್ದರು. ಈ ಸಂದರ್ಭದಲ್ಲಿ ಮನೆಗೆಲಸವನ್ನು ಮೈಮೇಲೆ ಎಳೆದುಕೊಂಡು ಯಾರು ಮಾಡಬೇಕು? ಮಾಡಿದರೆ ಕನಕ ಮಾಡಬೇಕು. ಈ ಮನೆ ಹೊಕ್ಕು ಹಳಬಳಾಗುವುದರೊಳಗೆ ಜವಾಬ್ದಾರಿ ಹೆಗಲೇರಿದ್ದು ಅವಳಿಗೆ ಸ್ವಲ್ಪವೂ ಪಥ್ಯವಾಗಿರಲಿಲ್ಲ.

ವೆಂಕಟರಾಮು ಸದಾ ಅವಳ ಬೆನ್ನಿಗೆ ನಿಂತು ಕೆಲಸ ಮಾಡಿಕೊಡುತ್ತಿದ್ದರೂ ಅವಳ ಮುಖದ ಗಂಟು ದಿನೇ ದಿನೇ ಬಿಗಿದುಕೊಳ್ಳುತ್ತಿತ್ತೇ ಹೊರತು ಬಿಚ್ಚುವ ಲಕ್ಷಣ ಗೋಚರಿಸದೆ ಸೀತಾಲಕ್ಷ್ಮಿಗೆ ಕಸಿವಿಸಿ. 'ಇಷ್ಟು ಬೇಗ ಯಾಕೆ ಬಂತೋ ಈ ಬಸಿರು? ಇನ್ನೊಂದು ವರ್ಷ ತಡೆದು ಆಗಿದ್ರೆ ಈ ಮನೆಯ ಪರಿಸ್ಥಿತಿ ಒಂದು ಹದಕ್ಕೆ ಬರ್ತಿತ್ತು' ಎಂದು ಅವಳ ಕಾರ್ಯಕ್ಕೆ ಬರದ ಯೋಚನೆ. ಹೀಗೆಲ್ಲಾ ಆಗಬಹುದೆಂದು ಕಮಲತ್ತಿಗೆಗೆ ಗೊತ್ತಿರಲಿಲ್ಲವೇ? ಗಂಡ ಊಹಿಸಿದಂತೆ ಅವಳು ಯಾರದ್ದೋ ಬೆನ್ನು ಬಿದ್ದು ನಡೆದಿದ್ದೇ ಹೌದಾಗಿದ್ದರೆ ತಾನು ಬಾಣಂತನ ಮುಗಿಸಿಕೊಂಡು ಬರುವವರೆಗೆ ಕಾಯಬಹುದಿತ್ತು. ಅಥವಾ ಕಾಯಲು ಅಸಾಧ್ಯವಾದ ಸನ್ನಿವೇಶ ಸೃಷ್ಟಿಯಾಗಿಬಿಟ್ಟಿತ್ತಾ? ಅಥವಾ ಗಂಡನ ಕಲ್ಪನೆಯೇ ತಪ್ಪಾಗಿ ಕಣ್ಣಿಗೆ ಕಾಣದಂತೆ ಎಲ್ಲೋ ದೂರ ಹೋಗಿ ಕಮಲಾ ಜೀವ ಬಿಟ್ಟಿರಬಹುದೇ? ತಮ್ಮಂದಿರು ಅವರವರ ಸಂಸಾರ ಕಟ್ಟಿಕೊಂಡಿರುವುದನ್ನು ಕಣ್ಣಾರೆ ಕಂಡವಳಿಗೆ ತಾನು ಒಬ್ಬಂಟಿ ಎನ್ನುವ ವ್ಯಥೆ ಕಾಡಿರಬಹುದೇ? ಬಸುರಿ ನಾನಾ ಯೋಚನೆಗಳಿಂದ ಕಂಗಾಲಾಗಿದ್ದಳು. ಈ ನಡುವೆ ಶಿವರಾಮನ ಕೋಪತಾಪಗಳು ಸಹನಾತೀತವೆನಿಸುವ ಹಂತ ತಲುಪಿದ್ದುವು. ಹಾಗೆನಿಸುತ್ತಿತ್ತು ಸೀತಾಲಕ್ಷ್ಮಿಗೆ. ಮೊದಲೇ ಉರುಕಲ. ಈಗಂತೂ ಕೇಳುವುದೇ ಬೇಡ. ಕಡ್ಡಿಯನ್ನು ಗುಡ್ಡ ಮಾಡಿ ಬಿಡುತ್ತಿದ್ದ. ವೆಂಕಮ್ಮ ಎದುರಿಗಿದ್ದರೆ ನಾಲಿಗೆ ಮತ್ತಷ್ಟು ಹರಿತವಾಗುತ್ತಿತ್ತು. 'ಮಗಳ ಮೇಲೆ ಒಂದು ಕಣ್ಣಿಟ್ಟಿರೋಕೆ ಆಗ್ದಿದ್ದೋಳು ನೀನೆಂತಾ ಅಮ್ಮ? ಅವತ್ತೇ ಅವಳ ತಲೆ ಬೋಳಿಸಿ ಕೂರಿಸೋಕೆ ಯಾಕೆ ಹೇಳ್ಲಿಲ್ಲ ನೀನು? ನಿನ್ನ ಮಕ ನೋಡಿ ನಾನು ತೆಪ್ಪಗಿದ್ದಿದ್ದು...' ಅಂದಿದ್ದ ಒಂದು ದಿನ.

'ಸುಮ್ಗಿರಿ ಮಾರಾಯ್ರೇ, ಕೈ ಮುಗೀತೀನಿ. ಮೊದಲೇ ಅರೆಜೀವ ಆಗಿದಾರೆ ಅತ್ತೆ. ನೀವು ಮತ್ತಷ್ಟು ವಿಷ ಕಾರ್ಬೇಡಿ...' ಸಂತೈಸಲು ನೋಡಿದ್ದಳು ಸೀತಾಲಕ್ಷ್ಮಿ.

'ನೀನೇನು ಕಡಿಮೆ ಅಂದ್ಕಂಡಿದೀಯಾ? ಯಾರ್ಯಾರನ್ನ ಎಲ್ಲೆಲ್ಲಿಟ್ಬೇರ್ಕೋ ಅಲ್ಲಲ್ಲೇ ಇಟ್ಬೇರ್ಕು ಅಂತ ಸುಮ್ನೆ ಹೇಳೋದಲ್ಲ. ಸಲಿಗೆ ಕೊಟ್ಟಿದ್ರೆ ತಲೇ ಮೇಲೆ ಹತ್ತಿ ಕೂತ್ಗಂತಿದ್ದಿ...' – ಸಿಟ್ಟು ಹೆಂಡತಿಯ ಮೇಲೆ ತಿರುಗಿತ್ತು. ಅವನ ಕಣ್ಣಿಂದ ಮರೆಯಾಗಿ ಸೀತಾಲಕ್ಷ್ಮಿ ಅಡುಗೆಮನೆ ಸೇರಿಕೊಳ್ಳುತ್ತಿದ್ದಂತೆ ಕನಕ ವ್ಯಂಗ್ಯವಾಗಿ ಹೇಳಿದ್ದಳು,

'ನಾನಾಗಿದ್ದಿದ್ರೆ ದೊಡ್ಡ ಕುರುಕ್ಷೇತ್ರಾನೇ